International Journal of Kannada Research 2016; 2(3): 63-64

International Journal of Kannada Research
www.kannadajournal.com

**ISSN: 2454–5813**
IJSR 2016; 2(3): 63-64
© 2016 IJKS
www.kannadajournal.com
Received: 03-04-2016
Accepted: 07-05-2016

**Prof. Raveendra M. Kulkarni**
Department of Music,
N.V. Degree College,
S.B.Temple Road, Kalaburagi,
Karnataka-585103.

**Correspondence**
**Prof. Raveendra M. Kulkarni**
Department of Music,
N.V. Degree College,
S.B.Temple Road, Kalaburagi,
Karnataka-585103

# ಚರ್ಮವಾದ್ಯಗಳಲ್ಲಿ ತಬಲಾದ ಮಹತ್ವ

**Prof. Raveendra M. Kulkarni**

ಲಲಿತ ಕಲೆಗಳಲ್ಲಿ ಸಂಗೀತಕ್ಕೆ ಉತ್ತಮವಾದ ಸ್ಥಾನವಿದೆ. ಸಂಗೀತ ವಾದ್ಯಗಳ ಐದು ವರ್ಗೀಕರಣದಲ್ಲಿ ಚರ್ಮವಾದ್ಯ ವಾದ್ಯಗಳಿಗೆ ವಿಶೇಷ ಸ್ಥಾನವಿದೆ. ಚರ್ಮವಾದ್ಯದಲ್ಲಿ ಅತಿ ಜನಪ್ರಿಯವಾಗಿರುವ ವಾದನವೆಂದರೆ ತಬಲಾವಾದ್ಯವೇ. ತಬಲಾ ಒಂದು ಅದ್ಭುತವಾದ ಚರ್ಮವಾದ್ಯವಾಗಿದ್ದು ಈ ವಾದ್ಯ ಜಗತ್ತಿನಾದ್ಯಂತ ಅತ್ಯಧಿಕ ಪ್ರಚಾರಕ್ಕೆ ಬಂದಿದೆ. ದೇವರ ನಾಮ ಹಾಡುವಾಗ ಪಕ್ಕವಾದ್ಯವಾಗಿ ನುಡಿಸುವುದುಂಟು. ಒಳ್ಳೆಯ ಗಾಂಭಿರ್ಯವಾದ ನಾದ ಮರ್ಯಾದಿತ ಅಕ್ಷರಗಳು ಸೌಮ್ಯವಾದ ನಾದ ಇದರಿಂದ ಹುಟ್ಟುತ್ತವೆ. ಬೆರುಳುಗಳಿಂದ ನುಡಿಸುವ ಈ ವಾದ್ಯವನ್ನು ಬಂದಬಾಜದಲ್ಲಿ ನುಡಿಸುತ್ತಾರೆ. ಸ್ವತಂತ್ರವಾದನಕ್ಕೂ ಇದು ಅಧಿಕವಾಗಿ ಬಳಸುತ್ತಾರೆ.

ತಂತು ವಾದ್ಯಗಳಿಗೆ, ಸುಷೀರವಾದ್ಯಗಳಿಗೆ ಘನ ವಾದ್ಯಗಳಿಗೂ ತಬಲಾ ಸಾಥಿಯ ಗಾಂಭಿರ್ಯತೆ ಕರ್ಣಾನಂದ. ದಾಸವಾಣಿ, ವಚನ, ಅಭಂಗ, ಅಂದರೆ ಕರ್ನಾಟಕದಲ್ಲಿ ಜನಿಸಿರುವ ದಾಸರು, ಶರಣರು ರಚಿಸಿರುವ ಹಾಡುಗಳ ಕಾರ್ಯಕ್ರಮವನ್ನು ರಂಜಿಸುವಲ್ಲಿ ತಬಲಾ ವಾದ್ಯದ ಸಾಥಿಯೇ ಮೆರಗನ್ನು ತಂದು ಯೆಶಸ್ವಿಗೊಳಿಸುವಲ್ಲಿ ತಬಲಾದ ಮೇಲುಗೈ. ಆಗ್ರಾದಲ್ಲಿ ಈಗಲೂ ನಡೆಯುವ ತಾನಸೇನ ಸಂಗೀತ ಸಮಾರೋಹದಲ್ಲಿ ಹಾಗೂ ಮತ್ತಿತರ ಸಂಗೀತ ಉತ್ಸವಗಳಲ್ಲಿ ತಂತುವಾದ್ಯ ಹಾಗೂ ಗಾಯನದ ಜೊತೆಗೆ ಸಾಥಿಗಾಗಿ ಬಳಸುವ ತಬಲಾ ವಾದ್ಯ ಹೆಚ್ಚಾಗಿ ಬಳಸುವುದುಂಟು.

ಭರತಭೂಮಿ ಪುಣ್ಯಭೂಮಿ ಭರತದೇಶದಲ್ಲಿ ಸಿಗುವಷ್ಟು ತಬಲಾ ಕಲಾವಿದರು ಬೇರೆಲ್ಲೂ ಸಿಗಲು ಸಾದ್ಯವಿಲ್ಲಾ ಒಂದು ವೇಳೆ ಬೇರೆ ದೇಶದಲ್ಲಿ ತಬಲಾ ಕಲಾವಿದರು ಸಿಗುವುದಾದರೆ ಅವರು ಮೂಲತ: ಭಾರತೀಯರೆ ಆಗಿರುವರು. ತಬಲಾ ವಾದ್ಯವನ್ನು ಜಗತ್ತಿನಾದ್ಯಂತ ಅತ್ಯದಿಕ ಪ್ರಚಾರವನ್ನು ಮಾಡಿದ ಶ್ರೇಯಸನ್ನು ಹಲವಾರು ಕಲಾವಿದರಿಗೆ ಸಲ್ಲುತ್ತದೆ. ಅಂತವರಲ್ಲಿ ಒಬ್ಬರಾಗಿದ್ದ ತಬಲಾ ಮಾಂತ್ರಿಕ ಉಸ್ತಾದ ಝೂಕೀರ ಹುಸೇನರ ತಬಲಾ ವಾದನವನ್ನು ವಿಕ್ಷಿಸಲು ಹಲವಾರು ಸಂಗೀತ ಪ್ರೇಮಿಗಳು ಕಿಕ್ಕಿರಿದು ಬರುವುದನ್ನು ನಾವು ನೊಡಿದ್ದೇವೆ. ತಬಲಾ ಸ್ವರಕ್ಕೆ ಕೂಡಿಸಿ ಥಾಪನ್ನು ನುಡಿಸಿದಾಗ ಆಗುವ ಆನಂದಕ್ಕೆ ಪಾರವೇ ಇರುವುದಿಲ್ಲಾ. ಗಾಂಭಿರ್ಯದೊಂದಿಗೆ ಮಾಧುರ್ಯವು ಈ ವಾದ್ಯದಲ್ಲಿ ಹೊರಸೂಸುವುದು. ಇದರಲ್ಲಿ ವಾದನ ವಿಧಿ ವಿಧಾನಗಳು ಹಲವಾರು ಇದ್ದು ಅನೇಕ ಘರಾಣೆಗಳು ಇವೆ. ಇದಲ್ಲದೆ ಕಥಕ ನೃತ್ಯಕ್ಕೆ ಈ ವಾದ್ಯ ಸಾಥಿಗಾಗಿ ಬಳಸುವುದು ಸಹ ಒಂದು ಪ್ರಕಾರದ ಪ್ರಚಾರಕ್ಕೆ ಎಡೆಮಾಡಿದೆ.

ತಬಲಾದ ವರ್ಣಗಳು ಆಲಿಸುವುದಕ್ಕೆ ಗಾಂಭಿರ್ಯವಾಗಿದ್ದು ನುಡಿಸುವ ಕಲಾವಿದ ಚೆನ್ನಾಗಿ ವಜನ್‌ದಾರ ನುಡಿಸಿದರೆ ಯಾವುದೇ ಧ್ವನಿವರ್ಧಕ ಸಹಾಯವಿಲ್ಲದೆ ಸುಮಾರು ಮೂರು ನೂರು ಜನರಿರುವ ಒಂದೇ ಸಭಾಮಂಟಪದಲ್ಲಿ ಇದರ ಶಬ್ದ ಸ್ಪಷ್ಟವಾಗಿ ಕೇಳಿಬರುತ್ತದೆ. ಶಾಸ್ತ್ರೀಯ ಸಂಗೀತಕ್ಕೆ ಬಳಕೆಯಾಗುವ ಚರ್ಮವಾದ್ಯಗಳಲ್ಲಿ ತಬಲಾದ ಕೊಡುಗೆಯು ಅಮುಲ್ಯವಾಗಿದೆ.

ಸಮಾಜದಲ್ಲಿ ತಬಲಾ ಅತ್ಯಧಿಕವಾಗಿ ಪ್ರಚಾರಗೊಳ್ಳುವುದಕ್ಕೆ ಅನೇಕ ಮಾಧ್ಯಮಗಳು ಕಾರಣವಾಗಿವೆ ಅದರಲ್ಲೂ ಅಂತರಜಾಲ ಬಂದಾಗಿನಿಂದ ಇನ್ನೂ ಪ್ರಚಾರಕ್ಕೆ ಬಂದಿದೆ. ಬೇರೆ ಮಾದ್ಯಮಗಳು ಸಹ ತಬಲಾ ಪ್ರಚಾರಕ್ಕೆ ತರಲು ಸಹಕಾರಿಯಾಗಿವೆ ಆಕಾಶವಾಣಿ, ದೂರದರ್ಶನ, ಧ್ವನಿಮುದ್ರಿಕೆಗಳ ಸ್ಟೂಡಿಯೋಗಳು ಹಾಗೂ ಸಮಾಜದಲ್ಲಿ ಏರ್ಪಡುತ್ತಿರುವ ಸಂಗೀತ ಕಾರ್ಯಮಗಳು ಇತ್ತಭಾಗದಲ್ಲಿ ಅತ್ಯಧಿಕ ಪ್ರಚಾರವನ್ನು ತಂದಿವೆ. ಅಲ್ಲದೆ ಇತ್ತಿತ್ತಲಾಗಿ ಜನರಲ್ಲಿ ತಬಲಾ ಕಲಿಯುವ ಹವ್ಯಾಸ ಹೆಚ್ಚಾಗಿರುವುದು ಸಹ ನಾವು ಕಾಣಬಹುದಾಗಿದೆ.

ತಬಲಾ ಒಂದು ಅದ್ಭುತವಾದ ಚರ್ಮವಾದ್ಯವಾಗಿದ್ದು ಜಗತ್ತಿನಾದ್ಯಂತ ಅತ್ಯಧಿಕ ಪ್ರಚಾರಕ್ಕೆ ಬಂದಿದೆ. ಗಾಯನದ ಎಲ್ಲಾ ಪ್ರಕಾರಗಳಿಗೆ ಸಾಥಿಗಾಗಿ ಬಳಸುವುದುಂಟು. ಗಾಂಭಿರ್ಯದೊಂದಿಗೆ ಮಾದುರ್ಯವು ಈ ವಾದ್ಯದಲ್ಲಿ ಹೊರಸೂಸುವುದು. ಬೆರುಳುಗಳಿಂದ ನುಡಿಸುವ ತಬಲಾ

ಪ್ರಕಾರದ ವಾದ್ಯವನ್ನು ಬಂದಬಾಜದಲ್ಲಿ ನುಡಿಸುತ್ತಾರೆ. ಸ್ವತಂತ್ರವಾದನಕ್ಕೂ ಇದು ಅಧಿಕವಾಗಿ ಬಳಸುತ್ತಾರೆ. ತಂತು ವಾದ್ಯಗಳಿಗೆ, ಸುಷೀರವಾದ್ಯಗಳಿಗೆ ಘನ ವಾದ್ಯಗಳಿಗೂ ತಬಲಾ ಸಾಥಿ ಹೆಚ್ಚಾಗಿ ಬಳಸುವುದುಂಟು. ಆಗ್ರಾದಲ್ಲಿ ಈಗಲೂ ನಡೆಯುವ ತಾನಸೇನ ಸಂಗೀತ ಸಮಾರೋಹ ಗಳಂತಹ ಪ್ರತಿಷ್ಠಿತ ಹಾಗೂ ಮತ್ತಿತರ ಸಂಗೀತ ಉತ್ಸವಗಳಲ್ಲಿ ತಂತುವಾದ್ಯ ಹಾಗೂ ಗಾಯನದ ಜೊತೆಗೆ ಸಾಥಿಗಾಗಿ ಬಳಸುವ ವಾದ್ಯವೇ ತಬಲಾ.

**ಆಧಾರ ಗ್ರಂಥಗಳು**

1. ತಾಲ ಸೌಂದರ್ಯ: ಲೇಖಕರು : ಗಣಪತ ಪರ್ವತಿಕರ
2. ಸಂಗೀತ ಮೃದಂಗ ಅಂಕ: ಲೇಖಕರು: ಲಕ್ಷ್ಮಿನಾರಾಯಣ ಗರ್ಗ್.